ಬರುವನಾ?' ಎಂಬ ಮಾತು ನನ್ನ ಬಾಯಿಂದ ಬರುತ್ತಿದ್ದಂತೆಯೇ ಹಾವು ಮೆಟ್ಟಿದಂತೆ ಎಗರಿಬಿದ್ದ ಅಜ್ಜಯ್ಯ.

'ಥೋ! ಆ ಜಬಾದಾರಿ ಎಲ್ಲಾ ನನ್ನ ಕೂಡಾಗೂದಿಲ್ರ. ನಾ ಬರೇ ಮುದ್ಕ' ಎನ್ನುತ್ತಾ ಹೊರಡಲೇ ಅಣಿಯಾದ. ಎಲಾ ಇವನಾ! ಇಷ್ಟೊತ್ತಿನವರೆಗೂ ಅತೀ ಉತ್ಸಾಹದಲ್ಲಿದ್ದವ ಇದ್ದಕ್ಕಿದ್ದಂತೆ ಹೊರಟನಲ್ಲ ಎಂದು ಪಿಚ್ಚೆನಿಸಿತು.

'ಆತು ಬ್ಯಾಡ ಬಿಡು. ಈಗೆಂತದೋ ಕೊಡ್ಲು ತೋರಿಸ್ತೆ ಅಂದ್ಯಲ್ಲಾ, ಅದ್ನಾರೂ ತೋರ್ಸು' ಎಂದು ನಾನೇ ವಿಷಯಾಂತರ ಮಾಡಿದೆ. ಆದರೆ ಅಕ್ತಂಗೀರ್ ಗುಂಡಿ ಎನ್ನುತ್ತಿದ್ದಂತೆ ಆತ ಮಗುಚಿ ಬಿದ್ದಿದ್ದೇಕೆ ಎಂಬ ಕುತೂಹಲ ಮಾತ್ರ ಉಳಿದಿತ್ತು. ಇದಕ್ಕಾಗಿ ಕೇಜಿಯಣ್ಣನ ತಲೆ ತಿನ್ನತೊಡಗಿದೆ.

'ಅಯ್ಯೋ ರಾಮ! ಈ ಸುದ್ದೀನಾ ನೀ ಅವನತ್ರೆ ಕೇಳಿದ್ದಲ್ಲ ತಂಗಿ. ಅಕ್ತಂಗೀರ್ ಗುಂಡಿ ಸುದ್ದಿ ಎತ್ತಿದ್ರೆ ಅವ್ನ ಗುಂಡಿಗೇನೇ ಒಡೆದೋಗ್ತು' ಎಂದು ನಗುತ್ತಾ ಹೇಳಿದ ಕೇಜಿಯಣ್ಣ. ಇಷ್ಟು ಹೇಳಿದ ಮೇಲಂತೂ ಅದೇನು ಎಂಬುದನ್ನು ತಿಳಿಯದಿದ್ದರೆ ತಲೆಯೇ ಸಾವಿರ ಹೋಳಾದೀತು ನನ್ನದು. ನನ್ನ ಕರಕರೆ ತಡೆಯಲಾರದೆ ಕೇಜಿಯಣ್ಣ ಕಥೆ ಹೇಳಿದ-

ಈ ಬೊಮ್ಮಜ್ಜನ ಮುತ್ತಜ್ಜ- ಅವನೂ ಬೊಮ್ಮನೇ, ಅವನ ಕಾಲದಲ್ಲಿ ನಡೆದ ಘಟನೆಯಿದು. ಈ ಅಕ್ತಂಗೀರ ಗುಂಡಿಗೆ (ಮಡುವಿಗೆ) ಅಷ್ಟಾಗಿ ಯಾರೂ ಹೋಗುತ್ತಿರಲಿಲ್ಲ. ಗೊಂಡಾರಣ್ಯದ ನಡುವಿನ ಹೊಳೆಯ ಭಾಗವದು. ಅಲ್ಲಿ ಅಪರೂಪಕ್ಕೆ ದೇವತಾ ಸಹೋದರಿಯರು ಧರೆಗಿಳಿದು ಬಂದು ಜಲಕ್ರೀಡೆ ಆಡುತ್ತಾರೆಂಬ ಪ್ರತೀತಿಯಿತ್ತು. ಹಾಗಾಗಿ ನೀರಿಗೆ, ಸ್ನಾನಕ್ಕೆ ಮುಂತಾದ ಯಾವುದೇ ಬಳಕೆಗೂ ಈ ಗುಂಡಿಗಿಂತ ಹೊಳೆಯ ಹರಿಯುವ ನೀರಿನ ಭಾಗವೇ ಜನಕ್ಕೆ ಮೆಚ್ಚಾಗಿತ್ತು. ಆದರೂ ಹೊಳೆಯಂಚಿಗೆ ಬಾಗಿ ನಿಂತಿದ್ದ ಮಾವಿನ ಮರಗಳಿಂದ ಅಪ್ಪೆಮಿಡಿಗಳನ್ನು ಕೊಯ್ಯುವುದಕ್ಕೆ ಯಾರಾದರೂ ಹೋಗುವುದಿತ್ತು. ಹಾಗೆಯೇ ಬೊಮ್ಮನೂ, ಅವನ ಧಣಿ ಸೂರಪ್ಪ ಹೆಗಡೆಯೂ ಅಕ್ತಂಗೀರ ಗುಂಡಿಗೆ ಹೋಗಿದ್ದರಂತೆ ಆ ದಿನ. ಅವರ ಗ್ರಹಚಾರಕ್ಕೆ ಅವತ್ತೇ ಅಕ್ತಂಗಿ ದೇವತೆಗಳು ಮೀಯಲು ನಿಲ್ಲಬೇಕೇ! ದೇವತೆಗಳ ಜಲಕ್ರೀಡೆ ಅಂದರೇನು ಮಕ್ಕಳಾಟವೇ! ಇವರಿಬ್ಬರು ಅಲ್ಲೇನನ್ನು ನೋಡಿದರೋ, ನೋಡಿದವರಿಗೆ ಅದೇನಾಯ್ತೋ, ಮನೆಗೆ ಬಂದವರೇ ಮುಸುಕಿಕ್ಕಿ ಮಲಗಿಬಿಟ್ಟರು. ಮನೆಮಂದಿ ಎಬ್ಬಿಸುವುದಕ್ಕೆ ಹೋದರೆ ಇಬ್ಬರೂ ಹುಚ್ಚು ಹಿಡಿದಂತಿದ್ದರಂತೆ. ಅಷ್ಟೇ ಆಗಿದ್ದರೆ ಸಮ. ರಾತ್ರಿ ಮನೆ ಜಗುಲಿಯಲ್ಲಿ ಮಲಗಿದ್ದವರು ಬೆಳಗ್ಗೆ ಅಂಬತ್ತಿಗೆ ನಾಪತ್ತೆ! ಅವರನ್ನು ಆನಂತರ ಯಾರೂ ನೋಡಿದ್ದಿಲ್ಲ. ಅಕ್ತಂಗೀರೇ ಅವರಿಬ್ಬರನ್ನು ಹಾರಿಸಿಕೊಂಡು ಹೋದರು ಎಂದು ಬೊಮ್ಮಜ್ಜನ ಪೈಕಿಯವರೆಲ್ಲ ಬಲವಾಗಿ ನಂಬಿಕೊಂಡಿದ್ದಾರೆ. ಅಪಹರಿಸಲ್ಪಟ್ಟವರು ಮರಳಿ ಬಂದು 'ಹಿಂಗಿಂಗಾಯ್ತು' ಎಂದಿದ್ದರೆ- ಅದಾದ್ರೂ ಒಂದ್ ಲೆಕ್ಕ. ಆದರೆ ಹೋದವರು ಬರಲೇ ಇಲ್ಲವಲ್ಲ. ಹಾಗಾಗಿ ಬೊಮ್ಮಜ್ಜನ ಕಡೆಯವರ್‍ಯಾರೂ ಅಕ್ತಂಗೀರ ಗುಂಡಿಯತ್ತ ತಲೆ ಹಾಕಿಯೂ ಮಲಗುವುದಿಲ್ಲ. ಇನ್ನು ಸೂರಪ್ಪ ಹೆಗಡೆಯ ಕುಟುಂಬದವರಂತೂ ಅತ್ತ ಬದಿಗಿಂದ ಸುಳಿದ ಗಾಳಿಗೂ ನಡುಗುತ್ತಾರೆ- ಎಂದು ವಿವರಿಸಿದ್ದ ಕೇಜಿಯಣ್ಣ.

ಮೊದಲಿಗೆ ಕಥೆ ಕೇಳಿ ನಗು ಬಂದರೂ, 'ಎಂದೋ ಏನೋ ಆಗಿದ್ದಕ್ಕೆ ಇಂದಿಗೂ ಹೆದರಿ ಸಾಯುತ್ತಾರಲ್ಲಾ ಈ ಜನ, ಏನು ಮೂರ್ಖರೋ!' ಎಂದು ಬೇಸರವೂ ಆಯಿತು. ನೀವೇ ತೋರಿಸಿ ಬನ್ನಿ ಆ ಜಾಗವನ್ನು ಎಂದು ಕೇಜಿಯಣ್ಣನನ್ನು ಕೇಳಿದರೆ, ಅದ್ಯಾವ ಗುಂಡಿಯನ್ನು ಆ ಹೆಸರಿನಿಂದ ಕರೆಯುತ್ತಾರೊ ಗೊತ್ತಿಲ್ಲ. ನಾವ್ಯಾರೂ ಅಲ್ಲಿಗೆ ಹೋದವರೇ ಅಲ್ಲ ಎಂದು ಜಾರಿಕೊಂಡುಬಿಟ್ಟರು. ಇನ್ನೀಗ ಬೊಮ್ಮಜ್ಜನೇ ಗತಿ! ಯಾವುದಕ್ಕೂ ಒಮ್ಮೆ ಬೊಮ್ಮಜ್ಜನನ್ನು ಮಾತಾಡಿಸೋಣ ಎಂದು ಕೆಳಗಿನ ಕೇರಿಯಲ್ಲಿದ್ದ ಅವರ ಮನೆಯತ್ತ ತೆರಳಿದೆ. ಮನೆಯೆಂದರೆ ಅದೊಂದು ಮಣ್ಣಿನ ಬಿಡಾರ. ಅವರ ಕೇರಿಯ ಎಲ್ಲರ ಮನೆಗಳು ಇದ್ದಿದ್ದೂ ಹಾಗೆಯೇ. ಪಕ್ಕಪಕ್ಕ ಮನೆಯಿರುವ ಕೇರಿಯೂ ಅಲ್ಲದೆ ಸ್ವಲ್ಪ ಬಿಡುಗಲಾಗಿರುವ ಎಂಟತ್ತು ಮನೆಗಳಿದ್ದವು ಅಲ್ಲಿ. ಮನೆಯಂಗಳದಲ್ಲಿದ್ದ ತನ್ನ ನಾಯಿಗೆ ಬಯ್ಯುವುದರಲ್ಲಿ ಪುರುಸೊತ್ತು ಕಳೆದುಕೊಂಡಿದ್ದ ಬೊಮ್ಮಜ್ಜ, ನನ್ನನ್ನು ನೋಡಿದಾಕ್ಷಣ ಗಕ್ಕನೆ ಮಾತು ನಿಲ್ಲಿಸಿದ.

'ಕುನ್ನಿಗೆ ಬೈದು ಖರ್ಚಾತನೋ ಬೊಮ್ಮಜ್ಜ'